

# ವಿಯೆಟ್ನಾಂ ಯುದ್ಧ ದೊಡ್ಡಣ್ಣ ಬೆಚ್ಚಿಬಿದ್ದ

ಜಗತ್ತಿಗೆ ಏಕೋ ಸದಾ ಯುದ್ಧದ ಹಪಹಪಿ. ಪ್ರಪಂಚದ ನಾನಾ ಭಾಗಗಳಲ್ಲಿ ಸದ್ಯ ದೇಶ–ದೇಶಗಳ ನಡುವಿನ ಸಂಘರ್ಷಗಳು ತಾರಕಕ್ಕೇರಿವೆ. ಅಂತಹ ಸಂಘರ್ಷಗಳಲ್ಲಿ ಅಮೆರಿಕದ ಕರಿನೆರಳೂ ಇದ್ದೇ ಇದೆ. ಲಾಗಾಯ್ತಿನಿಂದಲೂ ಯುದ್ಧಗಳು ಬೆಂಬಿಡದೆ ಕಾಡುತ್ತಿರುವುದನ್ನು ಮಾನವ ಚರಿತ್ರೆಯಂತೂ ದಾಖಲಿಸುತ್ತಲೇ ಬಂದಿದೆ. ಬುದ್ಧನ ನಾಡು ವಿಯೆಟ್ನಾಂನಲ್ಲಿ ಅಮೆರಿಕ ಮುಂದಾಳತ್ವದ ಯುದ್ಧ ನಡೆದು ಇದೀಗ ಐವತ್ತು ವರ್ಷಗಳು ಪೂರ್ಣಗೊಂಡಿವೆ. ಅಲ್ಲಿನ ಯುದ್ಧಭೂಮಿ, ಸ್ಮಾರಕ ಮತ್ತು ಯುದ್ಧ ಅವಶೇಷಗಳ ಮ್ಯೂಸಿಯಂ ಜಗತ್ತಿನ ಈ ಸಮರೋತ್ಸಾಹದ ಕುರಿತು ಏನನ್ನು ಹೇಳುತ್ತವೆ? ಇಲ್ಲಿವೆ, ವಿಯೆಟ್ನಾಂ ನೆಲದಿಂದ ಮಾಡಿಕೊಂಡು ಬಂದ ಕೆಲವು ಟಿಪ್ಪಣಿಗಳು...

■ ಪ್ರವೀಣ ಕುಲಕರ್ಣಿ

ವಿಯೆಟ್ನಾಂಗೆ ಹೋಗುತ್ತಿರುವುದಾಗಿ ಗೆಳೆಯರ ಎದುರು ಹೇಳಿದಾಗ, ಅವರು ‘ಓಹ್! ಅದೊಂದು ಯುದ್ಧಭೂಮಿ’ ಎಂದು ಉದ್ಗಾರ ತೆಗೆದರು. ವಿಯೆಟ್ನಾಂನಲ್ಲಿ ಸಶಸ್ತ್ರ ಹೋರಾಟ ಕೊನೆಗೊಂಡು ಬರೋಬ್ಬರಿ ಐವತ್ತು ವರ್ಷ ಪೂರ್ಣಗೊಂಡರೂ ಆ ದೇಶವನ್ನು ಜಗತ್ತು ಈಗಲೂ ಗುರ್ತಿಸುವುದು ಯುದ್ಧದ ಮೂಲಕವೇ. 20ನೇ ಶತಮಾನದ ಜಗತ್ತಿನ ಚರಿತ್ರೆಯಲ್ಲಿ ‘ವಿಯೆಟ್ನಾಂ ಯುದ್ಧ’ಕ್ಕೆ ಬಲು ವಿಶೇಷ ಸ್ಥಾನ. ಏಕೆಂದರೆ, ನೂರಾರು ಯುದ್ಧ ವಿಮಾನಗಳು, ಟ್ಯಾಂಕರ್‌ಗಳು ಮತ್ತು ಬಾಂಬರ್‌ಗಳೊಂದಿಗೆ ಬಂದಿದ್ದ ದೈತ್ಯ ಅಮೆರಿಕ ಸೇನೆಯು ಅಂತಹ ಯಾವ ಅತ್ಯಾಧುನಿಕ ಶಸ್ತ್ರಾಸ್ತ್ರಗಳೂ ಇಲ್ಲದ ಏಷ್ಯಾದ ಪುಟಾಣಿ ರಾಷ್ಟ್ರವೊಂದರ ಎದುರು ಸೋತು ಮಂಡಿಯೂರಿದ ಸಮರವದು. ತಮ್ಮ ಅಸ್ಮಿತೆಗಾಗಿ ವಿಯೆಟ್ನಾಂ ಜನ ಅಮೆರಿಕದ ಮಿಲಿಟರಿ ಪಡೆಯ ವಿರುದ್ಧ ನಡೆಸಿದ ವೀರೋಚಿತ ಹೋರಾಟ, ಅನುಭವಿಸಿದ ಭಯಾನಕ ಯಾತನೆ, ಮೆರೆದ ಅಮೆರಿಕದ ಯುದ್ಧಕ್ರೌರ್ಯ, ನಡೆದುಹೋದ ಮುಗ್ಧರ ಮಾರಣಹೋಮ, ಕೊನೆಗೆ ವಿಯೆಟ್ನಾಂಗೆ ಒಲಿದ ಗೆಲುವು... ಹೀಗೆ ನಮ್ಮ ಮುಂದೆ ಒಂದೊಂದಾಗಿ ವಿವರ ಬಿಚ್ಚಿಕೊಳ್ಳುತ್ತಾ ಸಾಗಿದಂತೆ ಮೈ ರೋಮಗಳು ಎದ್ದು ನಿಲ್ಲುತ್ತವೆ. ಒಂದೊಮ್ಮೆ ಸಮರಾಂಗಣವಾಗಿದ್ದ ಪ್ರದೇಶದಲ್ಲಿ ಈಗ ಹಸಿರು ನಳನಳಿಸುತ್ತಿದೆಯಾದರೂ ತನ್ನ ಆಳಕ್ಕೆ ಇಳಿದವರಿಗೆಲ್ಲ ಅದು, ಹಿಂದೆ ರಕ್ತದ ಹೊನಲಿನಿಂದ ಒದ್ದೆಯಾಗಿದ್ದ ‘ಕೆಂಪು ನೆಲ’ವನ್ನೂ ತೋರಿಸುತ್ತದೆ.

‘ನಾವೀಗ ಕು ಚಿ ಟನಲ್‌ಗೆ ಹೊರಟಿದ್ದೇವೆ’ ಎಂದು ಗೈಡ್ ಆ್ಯಂಡ್ರ್ಯೂ ಹೇಳಿದಾಗ, ಶ್ರೀನಗರ ಬಳಿಯ ಝೆಡ್ ಮೋಡ್‌ನಂತಹ ಯಾವುದೋ ಒಂದು ಸುರಂಗವನ್ನು ಅವರು ತೋರಿಸಬಹುದು ಅಂದುಕೊಂಡಿದ್ದೆ. ಆದರೆ, ನಮ್ಮ ಗೈಡ್ ತೋರಿಸಲು ಹೊರಟಿದ್ದು ಅಂತಹ ಅತ್ಯಾಧುನಿಕ ತಂತ್ರಜ್ಞಾನದ ಯಾವ ಸೃಷ್ಟಿಯನ್ನೂ ಅಲ್ಲ; ಬದಲು, ಜನಸಾಮಾನ್ಯರು ತೋಳ್ಬಲದಿಂದ ನಿರ್ಮಿಸಿದ ಸುರಂಗವನ್ನು ಎಂದು